## CENTRE FOR GEOINFORMATICS TECHNOLOGY, DOS in Geography, Manasagangotri Campus, University of Mysore, Mysuru-06, Karnataka, India

# "POOL CAMPUS DRIVE - 2024"

**Date: 28th August 2024, Time: 10.30am**

## Sector: Geospatial Science and Technology

**Venue: Geo-Manasa Auditorium**

To,

*Participating Companies*

atomgeo — a geospatial tech company
ATLAS SHINE Map IT
WAPS
spatialhawk …Empowering Geointelligence
UNIVERSAL Land Surveyors & Soil Testing Lab

# INAUGURATION PROGRAM SCHEDULE

**Inaugural Function** Time: 10:30 am

Welcome Speech:
**Prof. P. JAYASHREE**
Professor & Coordinator,
Centre for Geoinformatics Technology,
DOS in Geography, MGM

Induction Speech:
**Dr. VINAY M**
Guest Faculty - GIS
Centre for Geoinformatics Technology,
DOS in Geography, MGM

Inaugural Address:
**Prof. N.K. LOKANATH**
Hon'ble Vice Chancellor, University of Mysore

Chaired by
**Prof.RAMU**
Former Professor and Coordinator
Center for Geoinformatics Technology

Presidential Speech
**Prof.ARUN DAS.S**
Professor and Chairman
DOS in Geography, MGM

Representatives of the Companies

**Dr.SURESH CHITRAPU, Director**
**Mr. RAGHUNATH SHARMA, CEO**
Atlashine Technologies Pvt. Ltd, Bangaluru

**Mr. PRADEEP KAMBLI, CEO**
Vmaps Technologies Pvt. Ltd, Bangaluru

**Ms. ANU.B.S, Founder**
Universal Land Survey Groups, Bangaluru

**Mr. MOHAN, Director**
Atomgeo Pvt Ltd, Tirupati, Andhra Pradesh

**Mr. NAVEEN KUMAR HK, Director**
SpatialHawk Geoinformatics Pvt. Ltd, Hyderabad, Telangana

Vote of Thanks
**Dr. Rekha H.V**
Guest Faculty - GIS, Centre for Geoinformatics Technology
University of Mysore, Mysuru

*Cordially Invites all Faculty Members, Students, Research Scholars and Staffs*

# **POOL CAMPUS DRIVE – 2024**

**Date: 28-08-2024**

Centre for Geoinformatics Technology, Department of Geography, Manasaganotri Campus, University of Mysore has conduction a "POOL COMPUS DRIVE" on $28^{th}$ August 2024 at Geo Manasa Auditorium of the department. Prof. P Jayashree P, Professor and coordinator welcomed the gathering, Dr. Vinay M Faculty of the GIS department gave an induction speech, Hon'ble Vice Chancellor Prof, N. K. Lokanath sir University of Mysore Inaugurated the function and gave delivered the valuable speech on the importance of the pool campus selection and wished the students for their best future. The program chaired by Prof. Ramu Former Professor and Coordinator Centre for Geoinformatics Technology, presented by Prof. Arundas S Professor and chairman of the Department of Geography. Various companies have participated in the campus selection and all the students got their jobs in various companies.

A pool campus is a recruitment process where different companies visit to our department to conduct interview and select the candidates for various jobs opening every year. Students have access to various job opening from different companies through this pool campus selection.


CENTRE FOR TECHNOLOGY
DOS in Geography, Campus
Mysuru-06, India



# ಕ್ಯಾಂಪಸ್ ಸಂದರ್ಶನ: ಎಲ್ಲ ವಿದ್ಯಾರ್ಥಿಗಳು ಆಯ್ಕೆ

## ಮೈಸೂರು ವಿ.ವಿ ಭೂಗೋಳ ವಿಜ್ಞಾನ, ಜಿಐಎಸ್ ಅಧ್ಯಯನ ವಿಭಾಗ ಆಯೋಜನೆ

ಪ್ರಜಾವಾಣಿ ವಾರ್ತೆ



ಮಾನಸಗಂಗೋತ್ರಿಯ ಜಿಐಎಸ್ ಹಾಗೂ ಭೂಗೋಳ ಅಧ್ಯಯನ ವಿಭಾಗವು ಬುಧವಾರ ಆಯೋಜಿಸಿದ್ದ 'ಪೂಲ್ ಕ್ಯಾಂಪಸ್ ಡ್ರೈವ್' ಸಂದರ್ಶನಕ್ಕೆ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ಚಾಲನೆ ನೀಡಿದರು. ಪ್ರೊ.ಪಿ.ಜಯಶ್ರೀ, ಪ್ರೊ.ರಾಮು, ಸುರೇಶ್ ಚಿತ್ರಾಪು, ರಘುನಾಥ ಶರ್ಮ, ಪ್ರೊ.ಎಸ್.ಅರುಣ್ ದಾಸ್ ಪಾಲ್ಗೊಂಡರು

ಮೈಸೂರು: ಮಾನಸಗಂಗೋತ್ರಿಯ ಜಿಐಎಸ್ ಹಾಗೂ ಭೂಗೋಳ ಅಧ್ಯಯನ ವಿಭಾಗವು ಬುಧವಾರ ಆಯೋಜಿಸಿದ್ದ 'ಪೂಲ್ ಕ್ಯಾಂಪಸ್ ಡ್ರೈವ್' ಸಂದರ್ಶನದಲ್ಲಿ ಭೌಗೋಳಿಕ ವಿಜ್ಞಾನ ಮತ್ತು ತಂತ್ರಜ್ಞಾನ'ಕ್ಕೆ ಸಂಬಂಧಿಸಿದ ಕಂಪನಿಗಳಿಗೆ 42 ವಿದ್ಯಾರ್ಥಿಗಳು ಆಯ್ಕೆಯಾದರು.

'ಆಟಂ ಜಿಯೊ', 'ಅಟ್ಲಾಸ್ ಶೈನ್-ಮ್ಯಾಪ್ ಐಟಿ', 'ವ್ಯಾಪ್ಸ್', 'ಸ್ಪೇಶಿಯಲ್ ಹಾಕ್' ಹಾಗೂ 'ಯೂನಿವರ್ಸಲ್' ಕಂಪನಿಗಳು ಪಾಲ್ಗೊಂಡಿದ್ದವು. ಅವುಗಳಿಗೆ 100ಕ್ಕೂ ಹೆಚ್ಚು ಅಭ್ಯರ್ಥಿಗಳು ಬೇಕಿದ್ದರು. ಜಿಐಎಸ್‌ನ ಎಲ್ಲ 18 ಪದವೀಧರರು, ಭೂಗೋಳ ವಿಭಾಗದ 24 ಅಭ್ಯರ್ಥಿಗಳು ಉದ್ಯೋಗ ಗಿಟ್ಟಿಸಿದರು.

'ಕ್ಯಾಂಪಸ್ ಡ್ರೈವ್' ಉದ್ಘಾಟಿಸಿದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, 'ಕ್ಯಾಂಪಸ್ ಸಂದರ್ಶನಗಳು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉದ್ಯೋಗ ನೀಡಿ, ನಿರುದ್ಯೋಗವನ್ನು ತಪ್ಪಿಸುತ್ತವೆ. ಹೊಸ ಪ್ರತಿಭೆಗಳು ನೀಡುವ ಹೊಸ ಉಪಾಯಗಳು ಪ್ರತಿ ಕಂಪನಿಗೂ ಅಗತ್ಯವಾಗಿವೆ' ಎಂದರು.

'ಕ್ಯಾಂಪಸ್ ಸಂದರ್ಶನಗಳಿಂದ ಉದ್ಯಮಗಳು- ಶಿಕ್ಷಣ ಸಂಸ್ಥೆಗಳ ನಡುವೆ ಸಮನ್ವಯ ಮೂಡುತ್ತದೆ. ಯಾವ ಮಾದರಿಯ ಜ್ಞಾನ ಹಾಗೂ ಕೌಶಲ ಅಗತ್ಯ ಎಂಬುದನ್ನು ಸಂಸ್ಥೆಗಳಿಗೆ ಉದ್ಯಮಗಳು ಮನವರಿಕೆ ಮಾಡಿಕೊಡುತ್ತವೆ. ಪಠ್ಯಕ್ರಮದಲ್ಲಿ ಇದ್ದದ್ದೇ ಬೇರೆ, ಉದ್ಯೋಗದಲ್ಲಿನ ಸವಾಲುಗಳು ಬೇರೆಯಾದರೆ ಕಷ್ಟವಾಗುತ್ತದೆ. ಹೀಗಾಗಿ ಇಂಥ ಕಾರ್ಯಕ್ರಮಗಳು ನಡೆಯಬೇಕು' ಎಂದು ಅಭಿಪ್ರಾಯಪಟ್ಟರು.

'ಅಗತ್ಯ ತರಬೇತಿ ಹಾಗೂ ಕೌಶಲವನ್ನು ಕಂಪನಿಗಳು ವಿದ್ಯಾರ್ಥಿಗಳಿಗೆ ಕಲಿಸಬೇಕು. ಅಲ್ಲದೆ ಉದ್ಯೋಗ ನೀಡಿ ಪ್ರೋತ್ಸಾಹ ನೀಡುವುದರಿಂದ ಅಭ್ಯರ್ಥಿಗೆ ಕಂಪನಿಯ ಬೆಳವಣಿಗೆಯಲ್ಲಿ ಹೆಚ್ಚು ಕೆಲಸ ಮಾಡಬೇಕೆಂಬ ಉತ್ಸಾಹ ಮೂಡುತ್ತದೆ. ಕಂಪನಿಗೂ ಕಡಿಮೆ ವೆಚ್ಚದಲ್ಲಿ ಸಮರ್ಥ ಮಾನವ ಸಂಪನ್ಮೂಲ ಸಿಕ್ಕಂತಾಗುತ್ತದೆ' ಎಂದರು.

'ವಿದ್ಯಾರ್ಥಿಗಳಿಗೆ ಆರಂಭದಲ್ಲಿಯೇ ಉತ್ತಮ ತರಬೇತಿ, ಸಂಬಳ ಸಿಗುವುದರಿಂದ ಉದ್ಯೋಗದ ಅಭದ್ರತೆಯೂ ಎಂಥ ಸಂದರ್ಭದಲ್ಲಿಯೂ ಕಾಡುವುದಿಲ್ಲ. ವಿದ್ಯಾರ್ಥಿಗಳು ಅವಕಾಶವನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಜಿಐಎಸ್‌ನ ಸಂಯೋಜಕಿ ಪ್ರೊ. ಪಿ.ಜಯಶ್ರೀ, ಪ್ರೊ.ರಾಮು, ಪ್ರೊ.ಎಚ್. ವಿ.ರೇಖಾ, ಭೂಗೋಳ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ.ಎಸ್.ಅರುಣ್ ದಾಸ್, ಅಟ್ಲಾಸ್‌ಶೈನ್ ನಿರ್ದೇಶಕ ಸುರೇಶ್ ಚಿತ್ರಾಪು, ಸಿಇಒ ರಘುನಾಥ್ ಶರ್ಮ, ಆಟಂ ಜಿಯೊ ನಿರ್ದೇಶಕ ಮೋಹನ್ ಹಾಜರಿದ್ದರು.

### 'ಹೆಚ್ಚು ಅವಕಾಶ'

'ಭೂಗೋಳ ವಿಜ್ಞಾನಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಪದವೀಧರರಾದವರಿಗೆ ವಿಪುಲ ಉದ್ಯೋಗವಕಾಶವಿದೆ. ಪರಿಸರ, ಮಾನವ ಸಂಪನ್ಮೂಲ, ಪ್ರವಾಹ, ದತ್ತಾಂಶ, ಪ್ರವಾಸೋದ್ಯಮ, ನಗರ ಯೋಜನೆ ಮತ್ತು ಅಭಿವೃದ್ಧಿ, ಮೂಲಸೌಕರ್ಯ ಅಭಿವೃದ್ಧಿ, ಭೂ ಉಪಯೋಗದ ಯೋಜನೆ ಸೇರಿದಂತೆ ವಿವಿಧ ಕ್ಷೇತ್ರಗಳಿಗೆ ಪ್ರತಿಭೆಗಳು ಬೇಕಾಗಿದ್ದಾರೆ' ಎಂದು ಲೋಕನಾಥ್ ವಿವರಿಸಿದರು

ಆಟಂಜಿಯೊ ಕಂಪನಿಯ ಸಿಇಒ ಶ್ರವಣ್ ರೆಡ್ಡಿ, 'ಭೂ ಸ್ವರೂಪ ಅಧ್ಯಯನ, ನಕ್ಷೆ ರಚನೆ, ಅದರ ವಿಶ್ಲೇಷಣೆ ಸೇರಿದಂತೆ ಎಲ್ಲಕ್ಕೂ ಕೌಶಲವುಳ್ಳ ಅಭ್ಯರ್ಥಿಗಳು ಅಗತ್ಯ. ನೈಸರ್ಗಿಕ ವಿಕೋಪ ನಿರ್ವಹಣೆ, ವನ್ಯಜೀವಿ ರಕ್ಷಣೆ, ಕೃಷಿ, ಸರಕು ಸಾಗಣೆ, ಸಾರ್ವಜನಿಕ ಆರೋಗ್ಯ, ಅರಣ್ಯ, ವ್ಯಾಪಾರ ವಹಿವಾಟು, ಮಾರುಕಟ್ಟೆ ವಿಶ್ಲೇಷಣೆ, ರಕ್ಷಣೆ ಮತ್ತು ಭದ್ರತೆ, ರಿಯಲ್ ಎಸ್ಟೇಟ್ ಉದ್ಯಮಗಳೂ ಜಿಐಎಸ್, ಭೂಗೋಳ ವಿಜ್ಞಾನ ಪದವೀಧರರು ಬೇಕಾಗಿದ್ದಾರೆ' ಎಂದರು.